ಶ್ರೀ ಗಣೇಶ ಪಿ. ನಾಡೋರ
ಸಮೂಹ - ಸಂರಕ್ಷ,
C/o ಅಶೋಕ ಕುಮುಟೇಕರ,
ಗುಲಾಬಿ ಹೌಸ್,
ಕೋಷ್ಟಳಕರ ವಾಡಿ,
ಕುಮಟಾ (ಉ.ಕ.)-581343
ಮೊಬೈಲ್: 9845848362

ಗೆ: ಶ್ರೀ ಪಾಂಡುರಂಗ ಹೆಗಡೆ
ಪರಿಸರ ಸಂರಕ್ಷಣಾ ಕೇಂದ್ರ
ಒತ್ತಾರಿಮಾರ,
ಶಿರಸಿ (ಉ.ಕ.)

ಮಾನ್ಯಶ್ರೀ ಪಾಂಡುರಂಗ ಹೆಗಡೆ ಅವರಿಗೆ ನಮಸ್ಕಾರಗಳು.

ನೀವು ನಮ್ಮ ಸಂಸ್ಥೆಯ ಕಾರ್ಯಕ್ರಮಕ್ಕೆ ಬಂದಾಗಲೇ ನಿಮಗೆ ಈ ವಿಷಯ ಹೇಳಬೇಕೆಂದಿದ್ದೆ. ಆದರೆ ತಾವು ಬೇಗ ಹೋಗಿಬಿಟ್ಟಿರಿ. ನಾನು ತಮ್ಮ ಸಂಗಡ 2003ರಲ್ಲಿ ಕಾಳಿ ಪಾದಯಾತ್ರೆಯಲ್ಲಿ ಭಾಗವಹಿಸಿದ್ದೆನಲ್ಲ, ಆ ಅನುಭವಗಳನ್ನು ಜಿಲ್ಲೆಯ ಮಾಸಿಕ ಪತ್ರಿಕೆ 'ಮುಖಬಿಂಬ'ದಲ್ಲಿ ಧಾರಾವಾಹಿಯಾಗಿ ಬರೆಯುತ್ತಿದ್ದೇನೆ. ಈಗಾಗಲೇ ಮೂರು ಭಾಗ ಪ್ರಕಟವಾಗಿದ್ದು ಅದನ್ನು ನಿಮಗೆ ಕಳಿಸುತ್ತಿದ್ದೇನೆ.

ತಮ್ಮಿಂದ ಸಲಹೆ - ಸೂಚನೆಗಳಿದ್ದರೆ ದಯವಿಟ್ಟು ತಿಳಿಸಬೇಕಾಗಿ ವಿನಂತಿ.

ನಿಮಗೆ ಬೇಕಾದರೆ ಮುಂದೆ ಪ್ರಕಟವಾಗುವ ಈ ಧಾರಾವಾಹಿಯ ಪ್ರಕಟಿತ ಪ್ರತಿ ಕಳಿಸಿಕೊಡುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಗಣೇಶ ಪಿ. ನಾಡೋರ)

# ಭೂಮಿಯ ಮೇಲಿನ ಸ್ವರ್ಗ !

ಭಾಗ - 1


## ಕಾಳಿಯ ಒಡಲಿಗೆ ಕಾಗದದ ಕಿಚ್ಚು

### ಮೌನ ಕಣಿವೆಯಲ್ಲಿ ಪಾದಯಾತ್ರೆ ಅನುಭವ

**ಗಣೇಶ ಪಿ. ನಾಡೋರ**

**ಕ**ಡಲ ಮೊರೆತದ ಅಬ್ಬರದ ನಡುವೆ "ವಾಹ್! ಭೂಮಿಯ ಮೇಲಿನ ಸ್ವರ್ಗ" ಇದು ಎಂದು ಶ್ರೀಕಾಂತ ತನಗರಿವಿಲ್ಲದಂತೆಯೇ ಉದ್ಗರಿಸಿದ್ದ. ಅಷ್ಟು ಸುಂದರವಾದ ತಾಣವನ್ನು ನಾವು ಕಣ್ಣೊಳಗೆ ತುಂಬಿಕೊಳ್ಳತೊಡಗಿದ್ದೆವು. ಆ ತಾಣದ ಸೌಂದರ್ಯಕ್ಕೆ ಸೋತು ನಿಸರ್ಗ ಪ್ರೇಮಿಯಾದ ನಾನು ಮಂತ್ರಮುಗ್ಧನಾಗಿ ನಿಂತು ಬಿಟ್ಟೆ. ಎಷ್ಟೆಲ್ಲ ಸಲ ಕಾರವಾರಕ್ಕೆ ಬಂದು ಹೋಗಿದ್ದರೂ ಒಂದೇ ಒಂದು ಸಲವೂ ಇಲ್ಲಿಗೆ ಬರದೆ ಬಹಳಷ್ಟು ಕಳೆದುಕೊಂಡೆನೆನಿಸಿತ್ತು.

ಅವತ್ತು 2003 ಫೆಬ್ರುವರಿ 2ರ ಬೆಳಿಗ್ಗೆ ಏಳುಗಂಟೆ. ಅಂದಿನಿಂದ 12 ದಿನಗಳ ಕಾಲ ಕಾಳಿನದಿ ತಟದಲ್ಲಿ ಪರಿಸರವಾದಿ ಪಾಂಡುರಂಗ ಹೆಗಡೆ ನೇತೃತ್ವದಲ್ಲಿ 241 ಕಿ.ಮೀ. ಪರಿಸರ ಜಾಗೃತಿ ಪಾದಯಾತ್ರೆಯನ್ನು ಅಪ್ಪಿಕೋ ಚಳುವಳಿಯ ಕಾರ್ಯಕರ್ತರು ಹಮ್ಮಿಕೊಂಡಿದ್ದರು. ಯಾತ್ರೆಯನ್ನು "ಚಿಪ್ಕೋ" ಚಳವಳಿಯ ನೇತಾರ ಸುಂದರಲಾಲ ಬಹುಗುಣ ಉದ್ಘಾಟಿಸಲಿದ್ದರು. ಪಾದ ಯಾತ್ರೆಯಲ್ಲಿ ಭಾಗವಹಿಸಲೆಂದು ಬಂದಿದ್ದ ನಾವು ಸ್ವಲ್ಪ ಸಮಯ ಮೊದಲೇ ನಿರ್ಧರಿತ ಸ್ಥಳ ಕಾಳಿ ಸೇತುವೆಯ ಕೊನೆ (ಸದಾಶಿವಗಡ) ಯಲ್ಲಿ ಹಾಜರಿದ್ದೆವು. ಹಾಗಾಗಿ ಇರುವ ಸಮಯದಲ್ಲಿ ಏನು ಮಾಡಬೇಕೆಂಬುದು ತೋಚದೆ ಕಾಳಿನದಿ ಮುಖಜದತ್ತ ಮುಖ ಮಾಡಿ ನಿಂತವರಿಗೆ ಪಾಂಡುರಂಗ ಹರಿಕಂತ್ರ ಅವರು ಸದಾಶಿವಗಡ ಗುಡ್ಡ ಏರುವ ಸಲಹೆ ನೀಡಿ ನಡೆದಿದ್ದರು. ಅವರನ್ನು ಹಿಂಬಾಲಿಸಿದ ನಮಗೆ ನಿರಾಸೆಯಾಗಲಿಲ್ಲ. ನಮ್ಮ ಮುಂದೆ ಸೌಂದರ್ಯದ ಖಜಾನೆಯೇ ತೆರೆದುಕೊಂಡಿತ್ತು.



ಚಿತ್ರ : ಪಾಂಡುರಂಗ ಹರಿಕಾಂತ

ಅಲ್ಲಿ ಅರಬ್ಬೀ ಸಮುದ್ರ ಮತ್ತು ಕಾಳಿನದಿಯ ಸಂಗಮವಾಗಿದ್ದು, ಸುತ್ತಲೂ ಹಚ್ಚ ಹಸುರಾದ ಬೆಟ್ಟಗಳ ಸಾಲು ಪ್ರಕೃತಿ ಉಟ್ಟ ಸೀರೆಯ ಸೆರಗಿನಂತೆ ಕಂಗೊಳಿಸುತ್ತಿತ್ತು. ಕಾರವಾರದಿಂದ ಗೋವಾಕ್ಕೆ ಸಂಪರ್ಕ ಒದಗಿಸುವ ಬೃಹತ್ ಕಾಳಿ ಸೇತುವೆ ಈ ನಿಸರ್ಗಧಾಮದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದೆ ಅನಿಸಿತು. ಹಿಂದೆಲ್ಲ ಈ ಸೇತುವೆ ಇರಲಿಲ್ಲ. ಆಗ ದೋಣಿಯೇ ಸಂಪರ್ಕ ಸೇತುವೆಯಾಗಿತ್ತು. ಎರಡು ದೊಡ್ಡ ದೋಣಿಗಳ ನಡುವೆ ಅಡ್ಡವಾಗಿ ಹಲಗೆಗಳನ್ನು ಹಾಕಿ ಅದರ ಮೇಲೆ ಬಸ್ಸು ಮತ್ತಿತರ ವಾಹನಗಳನ್ನು ಸಾಗಿಸಲಾಗುತ್ತಿತ್ತು. ಈ ವ್ಯವಸ್ಥೆಗೆ "ಜಂಗಲ್" ಅಂತ ಕರೆಯುತ್ತಿದ್ದರು. ಮುಂದೆ ಬಾರ್ಜ್ ಯಂತ್ರ ಬಂದಿತು. ನಂತರದಲ್ಲಿ ಸೇತುವೆ ನಿರ್ಮಾಣವಾಯಿತು. ಈ ಸೇತುವೆಯ ಆಚೆ ಸಮುದ್ರದತ್ತ ದೃಷ್ಟಿ ಹಾಯಿಸಿದರೆ ಕೂರ್ಮಗಡ, ದೇವಗಡ, ಮದಲಿಂಗಗಡ ನಡುಗಡ್ಡೆಗಳು ಕಾಳಿ ತೊಟ್ಟ ಸರದ ಪದಕಗಳಂತೆ ಕಂಗೊಳಿಸುತ್ತಿದ್ದವು. ಬಲಗಡೆ ಕೈ ತೋರಿಸಿದ ಪಾಂಡುರಂಗ ಹರಿಕಂತ್ರ ಅವರು "ಅಲ್ನೋಡಿ, ಅದು ದೇವಭಾಗ ಬೀಚ್ ಈಗೀಗ ಅದು ಸಮುದ್ರ ಕೊರೆತಕ್ಕೆ ಬಲಿಯಾಗುತ್ತಿದೆ. ಐದು ವರ್ಷಗಳಿಂದೀಚೆಗೆ ಒಂದು ಕಿಲೋಮೀಟರ್ ಬೀಚನ್ನು ಸಮುದ್ರ ನುಂಗಿಹಾಕಿದೆ". ಎಂದರು. ಅದೇನು ಮಹಾ? ಮಾನವನ ದುರಾಸೆಗೆ ಇಡೀ ಕಾಳಿನದಿ ಕಣಿವೆಯೇ ವಿನಾಶದಂಚಿನಲ್ಲಿದೆ ನನ್ನಷ್ಟಕ್ಕೇ ನಾನೇ ಅಂದುಕೊಂಡೆ.

ಕಾಳಿನದಿಯ ಸುತ್ತಮುತ್ತ ಕಳೆದೆರಡು ದಶಕಗಳಿಂದ ಮಾನವನ ಅಭಿವೃದ್ಧಿಯ ಹಪಾಹಪಿತನಕ್ಕೆ ಹಣದ ಮಹಾಪೂರವೇ

ನಾಡಿನ ಸಮಸ್ತ ಜನತೆಗೆ ಹೊಸ ವರ್ಷದ ಹಾಗೂ

ಮಕರ ಸಂಕ್ರಮಣದ ಹಾರ್ದಿಕ ಶುಭಾಶಯಗಳು

**ಶ್ರೀ ಪ್ರಭಾಕರ ಎಂ. ನಾಯ್ಕ**

**ಮೂಡ್ಕಣಿ**

**ಕೆ. ಪಿ. ಸಿ. ಮತ್ತು ಪಿ. ಡಬ್ಲ್ಯೂಡಿ. ಗುತ್ತಿಗೇದಾರರು**

**ಮೂಡ್ಕಣಿ, ಹೊನ್ನಾವರ (ಉ.ಕ.)**

ಹೊಸ ವರ್ಷದ ಹಾರ್ದಿಕ ಶುಭಾಶಯಗಳು

ನಾಡಿನ ಸಮಸ್ತ ಜನತೆಗೆ ಹೊಸ ವರ್ಷವು ಸುಖ - ಸಮೃದ್ಧಿ ಹಾಗೂ

ನೆಮ್ಮದಿಯ ಬದುಕನ್ನು ಕಲ್ಪಿಸಲಿ ಎಂದು ಶುಭ ಹಾರೈಸುವ

**ಶ್ರೀ ಎನ್. ಎಸ್. ನಾಯ್ಕ**

ಅಧ್ಯಕ್ಷರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ (ರಿ.) ಹೊನ್ನಾವರ

ನಿರ್ದೇಶಕರು, ಟೀಚರ್ಸ್ ಕೋ-ಆಪರೇಟಿವ್ ಸೊಸೈಟಿ (ಉ.ಕ.)

ಸಾರಸ್ವತಕೇರಿ, ಮಂಕಿ, ತಾ. ಹೊನ್ನಾವರ

*ಹೊಸ ವರ್ಷದ ಹಾಗೂ ಮಕರ ಸಂಕ್ರಮಣದ ಹಾರ್ದಿಕ ಶುಭಾಶಯಗಳು*

ಹೊಸ ವರ್ಷವು ಪ್ರತಿ ಮನೆ-ಮನಗಳಲ್ಲಿ, ಸರ್ವರ ಬದುಕಿನಲ್ಲಿ

ಸುಖ - ಶಾಂತಿ ಹಾಗೂ ನೆಮ್ಮದಿಯನ್ನು ಕರುಣಿಸಲಿ ಎಂದು ಹಾರೈಸುವ

**ಶ್ರೀ ಚಂದ್ರಕಾಂತ ಕೊಚರೇಕರ**

**ಅಧ್ಯಕ್ಷರು**

ಮಾದರಿ ಗ್ರಾಮ ಪಂಚಾಯತ, ಹೇರಂಗಡಿ

ಗ್ರಾಮ ಪಂಚಾಯತ ಅಧ್ಯಕ್ಷ/ ಉಪಾಧ್ಯಕ್ಷರ ಒಕ್ಕೂಟ, ಹೊನ್ನಾವರ (ಉ.ಕ.)


ಹರಿದು ಬರುತ್ತಿದೆ. ಈಗಾಗಲೇ 36,000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣ ಹರಿದು ಬಂದು, ಪಶ್ಚಿಮಘಟ್ಟ ಪ್ರದೇಶದಲ್ಲಿಯೇ ಅತಿ ಸೂಕ್ಷ್ಮ ಪ್ರದೇಶವಾದ ಕಾಳಿ ಕಣಿವೆಯ ನಿದ್ದೆಗೆಡಿಸಿದೆ. ದೇಶದ ಬೇರೆ ಎಲ್ಲೂ ಇಷ್ಟು ಸೀಮಿತ ಪ್ರದೇಶದಲ್ಲಿ ಇಷ್ಟು ದೊಡ್ಡ ಹಣದ ಗಂಟು ವಿನಿಯೋಗ ಆಗಿಲ್ಲ. ಇತ್ತ ಸೀಬರ್ಡ್ ಯೋಜನೆ, ಅತ್ತ ನ್ಯಾಶನಲ್ ಪವರ್ ಕಾರ್ಪೋರೇಶನ್‌ನ ಕೈಗಾ ಅಣುಸ್ಥಾವರ, ಸುಫಾ, ನಾಗಝರಿ, ಕೊಡಸಳ್ಳಿ, ಕದ್ರಾ ಸೇರಿದಂತೆ ಒಟ್ಟು ಆರು ಆಣೆಕಟ್ಟುಗಳು. ಕೇವಲ 184 ಕಿ.ಮೀ. ಹರಿಯುವ ಪುಟ್ಟ ಕಾಳಿನದಿಗೆ ಇಷ್ಟೆಲ್ಲ ಉಸಿರು ಬಿಗಿಯುವ ಅಣೆಕಟ್ಟುಗಳು. ವಿಶ್ವದಲ್ಲಿಯೇ ಇಷ್ಟೊಂದು ಅತ್ಯಾಚಾರಕ್ಕೆ ಒಳಗಾದ ನದಿ ಇದೊಂದೇ ಇರಬೇಕು.



**ಯುವ** ಲೇಖಕ ಗಣೇಶ ನಾಡೋರ ಹಲವು ವರ್ಷಗಳಿಂದ ಬರೆಯುತ್ತ ಬಂದಿದ್ದಾರೆ. ಇವರು ಕತೆಗಾರರು, ಛಾಯಾಚಿತ್ರಗಾರರು. ಪತ್ರಕರ್ತರಾಗಿಯೂ ಕೆಲಸ ಮಾಡಿದವರು. ಇವರ 'ಪ್ರಾಣಿ ಪಕ್ಷಿಗಳ ಕತೆಗಳು', 'ಪ್ರಾಣಿಗಳ್ಳರು ಮತ್ತು ಮಯೂರ', 'ಬೆಳ್ಳಕ್ಕಿ ಮತ್ತು ಬುಲ್ ಬುಲ್' ಪುಸ್ತಕಗಳು ನವಕರ್ನಾಟಕ ಪ್ರಕಾಶನದಿಂದ ಪ್ರಕಟವಾಗಿವೆ. 'ಪ್ರಾಣಿಗಳ್ಳರು ಮತ್ತು ಮಯೂರ' 2001ನೇ ಸಾಲಿನ ಬಿ. ಎಂ. ಶ್ರೀ. ಪ್ರತಿಷ್ಠಾನದ ಸಾವಿತ್ರಮ್ಮ ದತ್ತಿ ಮಕ್ಕಳ ಸಾಹಿತ್ಯ ಪ್ರಶಸ್ತಿ ಗಳಿಸಿದೆ.

ಕಳೆದ ವರ್ಷ ಫೆಬ್ರುವರಿಯಲ್ಲಿ ಪರಿಸರವಾದಿ ಪಾಂಡುರಂಗ ಹೆಗಡೆ ಪರಿಸರ ಜಾಗೃತಿಗಾಗಿ ಕಾಳಿನದಿ ತಟದಲ್ಲಿ ಪಾದಯಾತ್ರೆ ಹೊರಟಾಗ ಇವರೂ ತಮ್ಮ ಹೆಗಲಿಗೆ ಕ್ಯಾಮರಾ ಏರಿಸಿಕೊಂಡು ನಡೆದರು. ಆ ಪಾದಯಾತ್ರೆ ಅನುಭವವನ್ನು 'ಯುವಬಿಂಬ'ದ ಓದುಗರೊಂದಿಗೆ ಧಾರವಾಹಿಯಾಗಿ ಹಂಚಿಕೊಳ್ಳುತ್ತಿದ್ದಾರೆ.

ಪುಸ್ತಕ 'ಸಂರಕ್ಷ' ಸಂಸ್ಥೆಯಲ್ಲಿ ಗಣೇಶ ನಾಡೋರ ಕಾರ್ಯನಿರ್ವಹಿಸುತ್ತಿದ್ದಾರೆ.




ಈ ಆಣೆಕಟ್ಟುಗಳ ದೆಸೆಯಿಂದಾಗಿ ಈ ನದಿಯ ಹರಿವು ಕೇವಲ 18 ಕಿ.ಮೀ. ಗಳಿಗೆ ಮಾತ್ರ ಸೀಮಿತವಾಗಿದೆ. ಉಗಮ ಸ್ಥಾನದಿಂದ 10 ಕಿಮೀ. ಹರಿಯುವುದರೊಳಗೆ ಸುಫಾ ಜಲಾಶಯದ ಹಿನ್ನೀರಿನಲ್ಲಿ ಕಾಳಿಯ ಹರಿವು ಲೀನವಾಗುತ್ತದೆ. ನಂತರ ಗಣೇಶಗುಡಿಯಿಂದ ದಾಂಡೇಲಿಗೆ ಆಣೆಕಟ್ಟಿನಿಂದ ನೀರು ಬಿಟ್ಟಲ್ಲಿ ಮಾತ್ರ ಹರಿವು. ದಾಂಡೇಲಿಯಿಂದ ಪುನಃ ಬೊಮ್ಮನಳ್ಳಿ ಹಾಗೂ ತಟ್ಟಿಹಳ್ಳದಲ್ಲಿ ತಡೆ. ಅಲ್ಲಿಂದ ನೇರವಾಗಿ ಸುರಂಗದಲ್ಲಿ ನಾಗಝರಿ ವಿದ್ಯುದಾಗರ ತಲುಪಿದರೆ, ಮತ್ತೆ ಕೊಡಸಳ್ಳಿ ಜಲಾಶಯದಲ್ಲಿ ಲೀನ. ಅಲ್ಲಿಂದ ಮುಂದುವರೆದರೆ ಕದ್ರಾದಲ್ಲಿ ಮತ್ತೆ ತಡೆ. ಕದ್ರಾದಿಂದ 8 ಕಿ.ಮೀ. ಹರಿಯುವಷ್ಟರಲ್ಲಿ ಸಮುದ್ರದ ಜೊತೆ ಈ ಸ್ಥಳದಲ್ಲಿ ಸೇರುತ್ತದೆ.

ಹೀಗೆ ಹೆಜ್ಜೆ ಹೆಜ್ಜೆಗೂ ಕಾಳಿನದಿಯ ಹರಿವನ್ನು ನಿಯಂತ್ರಿಸಿ, ಮಾನವ ತನ್ನ ಅಭಿವೃದ್ಧಿಗೆ ಬಳಸಿಕೊಂಡಿದ್ದಾನೆ. ಇಲ್ಲಿ ಉತ್ಪಾದನೆಯಾಗುವ ಜಲವಿದ್ಯುತ್ ಕರ್ನಾಟಕದ ಐದು ಕೋಟಿ ಕನ್ನಡಿಗರ ಮನೆ-ಮನವನ್ನು ಬೆಳಗುತ್ತಿದೆ. ಆದರೆ ಅಪಾರವಾದ ಕೊಡುಗೆ ನೀಡುವ ಈ ನದಿಯ ರಕ್ಷಣೆಗೆ ಮಾನವ ಮಾಡಿದ್ದೇನು?

ತನ್ನ ಕನಸಿನ ಸೌಧ ಕಟ್ಟಲು ಕಾಳಿಕಣಿವೆಯ ಮರಗಳಿಗೆ ಕೊಡಲಿ ಏಟು ಹಾಕಿದ್ದಾನೆ. ನದಿಯ ಒಡಲಿನಿಂದ ಬೇಕಾಬಿಟ್ಟಿಯಾಗಿ ಉಸುಕು ಮೊಗೆಯುತ್ತಿದ್ದಾನೆ. ಅಣುಸ್ಥಾವರ, ಕಾರ್ಖಾನೆಗಳ ಮಾಲಿನ್ಯವನ್ನು ಬಿಟ್ಟು, ನದಿಯ ಒಡಲಿಗೆ ಬೆಂಕಿ ಹಚ್ಚಿದ್ದಾನೆ. ಗಣಿಗಾರಿಕೆ ನಡೆಸಿ ನದಿಯ ಉಗಮಕ್ಕೆ ಪೆಟ್ಟು ಕೊಟ್ಟಿದ್ದಾನೆ.

ಆದರೂ ಮುನಿಯದ ಕಾಳಿ ನಿಧಾನವಾಗಿ ಹರಿದು, ಸಮುದ್ರರಾಜನ ತೆಕ್ಕೆಗೆ ಬೀಳುತ್ತ, ಧೂರ್ತ ಮಾನವರಿಗೆ ಸೌಂದರ್ಯದ ರಸದೌತಣ ಉಣಬಡಿಸುತ್ತಲೇ ಇದ್ದಾಳೆ!

(ಇನ್ನೂ ಇದೆ)



### ಪ್ರಳಯ

ಪಟ್ಟಣಗಳಲ್ಲಿ ಕಾಂಕ್ರೆಟ್ ಕಾಡು
ಹಳ್ಳಿಗಳೆಲ್ಲ ಅಕೇಶಿಯಾ ಕಾಡು
ಕಾಡಾಯ್ತು ಮನುಷ್ಯನಿಂದ ನಾಡು
ಕೆಲವೇ ವರ್ಷಗಳಲ್ಲಿ ನಶಿಸುವುದು ನಾಡು
ಹೀಗಾದರೆ ಪ್ರಳಯ ಜರೂರ್ ನೋಡು

### ಒಂದೇ ಜನ್ಮ

ಹಾಗಾದರೇ ಹೀಗಾಗುತ್ತೆ
ಹೀಗಾದರೇ ಹಾಗಾಗುತ್ತೆ
ಎಂದು ಚಿಂತಿಸಿ ಚಿತೆ
ಏರಬೇಡ ಗೆಳತಿ
ನಮ್ಮಿಬ್ಬರಿಗಿರುವುದೊಂದೆ ಜನ್ಮ

ಶಿವಶಂಕರ ಕೋಲಸಿರ್ಸಿ


**ಹೊಸ ವರ್ಷದ ಹಾಗೂ ಮಕರ ಸಂಕ್ರಮಣದ ಹಾರ್ದಿಕ ಶುಭಾಶಯಗಳು**


# ಶ್ರೀಮತಿ ಲಕ್ಷ್ಮೀ ಶೇಖರ ನಾಯ್ಕ

ಉಪಾಧ್ಯಕ್ಷರು ತಾಲೂಕ ಪಂಚಾಯತ, ಹೊನ್ನಾವರ
ನಗರೆ, ತಾ.: ಹೊನ್ನಾವರ (ಉ.ಕ.)


## ವ್ಯಂಗ್ಯ ಬಿಂಬ

ಜಿ. ಎಂ. ಬೊಮ್ನಳ್ಳಿ
ಶಿರ್ಸಿ





# ಹಸಿರು ಸಂತನ ಸಾನಿಧ್ಯ !


ಭಾಗ -2

## ಕಾಳಿಯ ಒಡಲಿಗೆ ಕಾಗದದ ಕಿಚ್ಚು

### ಮೌನ ಕಣಿವೆಯಲ್ಲಿ ಪಾದಯಾತ್ರೆ ಅನುಭವ

**ಗಣೇಶ ಪಿ. ನಾಡೋರ**

'ಕಾಳಿ ನದಿ ಉಳಿಸಿ 'ಪಾದಯಾತ್ರೆ ಉದ್ಘಾಟನೆಗೆಂದು ಬರಲಿರುವ ಸುಂದರಲಾಲ ಬಹುಗುಣ ಬಹಳ ಫೇಮಸ್ ವ್ಯಕ್ತಿ ಅಂತ ನನಗೆ ಗೊತ್ತಿತ್ತು. ಅವರು ಕಾರಿನಿಂದಿಳಿದವರೇ ದಡದಡನೆ ವೇದಿಕೆಗೆ ಬರುತ್ತಾರೆ. ಅವರ ರಕ್ಷಣೆಗೆ ಬಂದೂಕುಧಾರಿ ಪೋಲಿಸರು ಧಾವಿಸುತ್ತಿರುತ್ತಾರೆ. ನೂರಾರು ಅಭಿಮಾನಿಗಳು ಬಹುಪಾರಾಕ್ ಹೇಳುತ್ತಾರೆ. ಎಲ್ಲೆಲ್ಲೂ ಗದ್ದಲ, ಗೌಜಿ, ಜೈಕಾರ ನೂಕುನುಗ್ಗಲು. ಅವರು ಮೈಕ್ ಹಿಡಿದು ಪರಿಸರ ಹಾನಿಗೆ ಕಾರಣರಾಗುತ್ತಿರುವವರನ್ನು ಉಗ್ರವಾಗಿ ತರಾಟೆಗೆ ತೆಗೆದು ಕೊಳ್ಳುತ್ತಾರೆ. ಅದಕ್ಕೆ ಕ್ರಮ ಕೈಗೊಳ್ಳದ ಸರಕಾರವನ್ನು ಕಟುವಾದ ಶಬ್ದಗಳಿಂದ ವಿರೋಧಿಸುತ್ತ ಹೇಳಿಕೆ ಕೊಡುತ್ತಾರೆ. ನಾಳೆ ಅದು ದಿನಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಸುದ್ದಿಯಾಗುತ್ತದೆ......



ಚಿತ್ರ : ಪಾಂಡುರಂಗ ಹರಿಕಾಂತ

ಈ ನನ್ನ ನಿರೀಕ್ಷೆ ಸುಳ್ಳಾಗಿತ್ತು!

ಮುಂಜಾವಿನ ಮಂಜಿನಲ್ಲಿ ಅವರು ಅದೇಷ್ಟು ಸೌಮ್ಯವಾಗಿ ನಡೆದು ಬಂದರೆಂದರೆ, ದೇವಲೋಕದಿಂದ ಸಂತನೊಬ್ಬ ಇಳಿದುಬಂದಂತೆ ಭಾಸವಾಯಿತು. ಕೃಶ ಶರೀರ, ಬಿಳಿಯ ಗಡ್ಡ, ತಲೆಗೆ ಬಿಳಿ ರುಮಾಲು ಕಾವಿಬಣ್ಣದ ಖಾದಿ ಜುಬ್ಬಾ, ನಿಷ್ಕಲ್ಮಶ ಮುಗ್ಧನಗೆ. ಹೌದು, ಅವರು ಹಸಿರು ಲೋಕದ ಸಂತನೇ ಸರಿ!


ಪ್ರಕೃತಿಮಾತೆಯ ವಿನೀತ ಭಕ್ತನಂತೆ ಕಾಳಿಸಂಗಮದಲ್ಲಿ ಕಾಳಿ ಪೂಜೆ ಮಾಡಿ ಪಾದಯಾತ್ರೆ ಉದ್ಘಾಟಿಸಿದ ಬಹುಗುಣ ಪಾದಯಾತ್ರೆಯ ಮೂಲಕ ಬಿತ್ತರಿಸುವ ಸಂದೇಶ ಜನರ ಹೃದಯ ತಲುಪುತ್ತದೆ ಎಂದರು. ಅವರಿಗೆ ಮಾತನಾಡಲು ಮೈಕ್ ವ್ಯವಸ್ಥೆ ಕೂಡ ಇರಲಿಲ್ಲ. ಅವರಿಗೆ ಅದರ ಅವಶ್ಯಕತೆಯೂ ಕಾಣಲಿಲ್ಲ. ಪುಟ್ಟ ಮೈಕ್ ತರಲಾಗಿತ್ತು. ಅದನ್ನೆ ಕೈಗೆ ಕೊಡಲಾಯಿತು. ಅದೂ ಕೈಕೊಟ್ಟಿತು. ಆದರೂ ಸ್ವಲ್ಪವೂ ತಾಳ್ಮೆ ಕಳೆದುಕೊಳ್ಳದ ಬಹುಗುಣರು ಮೈಕು ಬದಿಗಿಟ್ಟು ಮಾತನಾಡಿದರು.

ಭಾರತೀಯ ಸಂಸ್ಕೃತಿಯೆಂದರೆ ಪ್ರಕೃತಿಯೊಂದಿಗಿನ ಜೀವನ ಶೈಲಿ. ಇಲ್ಲಿ ಜೀವನವನ್ನು ವಾಸ್ತವ ದೃಷ್ಟಿಯಿಂದ ನೋಡಲಾಗುತ್ತದೆ. ಮರ, ನದಿ, ಸಮುದ್ರದ ಪೂಜೆ ಮಾಡಲಾಗುತ್ತದೆ. ಆದರೆ ಇಂದು ನದಿಯನ್ನು ಭೋಗ ವಸ್ತುವನ್ನಾಗಿ ನೋಡಲಾಗುತ್ತಿದೆ. ಹಾಗಾಗಿ ಎಲ್ಲ ನದಿಗಳೂ ಸಂಕಷ್ಟದಲ್ಲಿವೆ. ಅವುಗಳನ್ನು ರಕ್ಷಿಸಲು ಮುಂದಾಗಬೇಕು ಎಂದರು.

ಪತ್ರಕರ್ತರಿಗೂ ಅವರು ಕಿವಿಮಾತು ಹೇಳಿದರು. ರಾಜಕಾರಣಿಗಳ ಭಾಷಣವನ್ನು, ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆಯುವುದನ್ನು ಬಿಡಿ. ನದಿ, ಮರ, ದೀನದಲಿತರು ಮಾತನಾಡುವುದಿಲ್ಲ. ಅವರ ಬಗ್ಗೆ ಬರೆಯಿರಿ. ಮೂಕರಿಗೆ ಧ್ವನಿ ನೀಡಿದ ಖುಷಿ ಪಡೆಯಿರಿ ಎಂದರು.

ನಂತರ ಪಾದಯಾತ್ರೆಗೆ ಹೊರಟವರೊಂದಿಗೆ ಹೆಜ್ಜೆ ಹಾಕಿಯೇಬಿಟ್ಟರು. ನಾವು ಪಾದಯಾತ್ರೆ ಮುಂದುವರೆಸುತ್ತೇವೆ. ನೀವು ಆರಾಮ ತೆಗೆದುಕೊಳ್ಳಿ ಎಂದು ಪರಿಸರ ಕಾರ್ಯಕರ್ತರು ಹೇಳಿದರೂ ಅವರು ಒಪ್ಪಲಿಲ್ಲ. ಈಗಲೂ ನಾನು ದಿನಾಲೂ ಬರಿಗಾಲಲ್ಲಿ ಹದಿನೈದು ಕಿಲೋಮೀಟರ್ ಪಾದಯಾತ್ರೆ ಮಾಡಬಲ್ಲೆ ಎಂದು ನಮ್ಮಲ್ಲಿ ಅಚ್ಚರಿ ಮೂಡಿಸಿಬಿಟ್ಟರು. ಆಗಲೇ ಅವರಿಗೆ 71 ವರ್ಷ ವಯಸ್ಸು !

ತೀರಾ ಸರಳತೆ, ಎಲ್ಲರಲ್ಲೂ, ಎಲ್ಲದರಲ್ಲೂ ದೇವರನ್ನು ಕಾಣುವ ಬಹುಗುಣ ಈ ಪಾದಯಾತ್ರೆ ತಂಡದಲ್ಲಿ ಪತ್ರಕರ್ತರಿಲ್ಲವೆ? ಎಂದು ಕೇಳಿದರು. ಇದ್ದಾರೆ, ಇವರು ಗಣೇಶ



# ಆಟ್ಯಾ-ಪಾಟ್ಯಾದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ ಶಿವಾನಂದ ಮೊಗೇರ

ಆರ್. ಎಚ್. ಭಟ್ಕಳ



**ತಾ**ಲೂಕಿನ ಗ್ರಾಮೀಣ ಪ್ರದೇಶವಾದ ಬೆಳಕೆಯಲ್ಲಿ ಹುಟ್ಟಿ-ಬೆಳೆದ ಶಿವಾನಂದ ಡಿ. ಮೊಗೇರ ಆಟ್ಯಾ-ಪಾಟ್ಯಾದಲ್ಲಿ ಕರ್ನಾಟಕ ರಾಜ್ಯ ತಂಡವನ್ನು 7 ಭಾರಿ ಪ್ರತಿನಿಧಿಸಿ ಒಮ್ಮೆ ತಂಡದ ನಾಯಕನಾಗಿಯೂ ಸೇವೆ ಸಲ್ಲಿಸುವ ಮೂಲಕ ಕ್ರೀಡಾಸಕ್ತರ ಗಮನ ಸೆಳೆದಿದ್ದಾನೆ.

ಶಿಕ್ಷಣದ ಪ್ರಾಥಮಿಕ ಹಂತದಿಂದಲೇ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ ಹೊರಹೊಮ್ಮಿದ ಈತ ಅಂದು ಯಕ್ಷಗಾನದೆಡೆಗೆ ಆಕರ್ಷಿತನಾಗಿ ಮಕ್ಕಳ ಮೇಳದ ಸದಸ್ಯನಾಗಿದ್ದ. ತನ್ನ ಪ್ರಾಥಮಿಕ ಶಿಕ್ಷಣವನ್ನು ಸೋಡಿಗದ್ದೆ ಬೆಳಕೆಯಲ್ಲಿ ಮುಗಿಸಿದ ಈತ ಪ್ರೌಢಶಾಲಾ ವಿದ್ಯಾಭ್ಯಾಸಕ್ಕಾಗಿ ಅಣ್ಣನ ಸಹಾಯದಿಂದ ಧಾರವಾಡದ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್‌ಗೆ ಸೇರಿದ. ಇದು ಈತನ ಕ್ರೀಡಾಸಕ್ತಿಗೆ ಪೂರಕವಾದ ಸ್ಥಳವಾಗಿದ್ದು ಅಲ್ಲಿನ ದೈಹಿಕ ಶಿಕ್ಷಕರಾದ ವಿ. ಢಿ. ಪಾಟೀಲ್‌ರವರ ಮಾರ್ಗದರ್ಶನದಲ್ಲಿ ಆಟ್ಯಾ-ಪಾಟ್ಯಾ ಆಟದೆಡೆ ಆಕರ್ಷಿತನಾದ.

9 ನೇ ತರಗತಿಯಲ್ಲಿರುವಾಗಲೇ ಕರ್ನಾಟಕ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದು ಈತನಲ್ಲಿರುವ ಕ್ರೀಡಾ ಪ್ರತಿಭೆಗೆ ಸಾಕ್ಷಿಯಾಗಿದೆ ಬಾಗಲಕೋಟದಲ್ಲಿ ನಡೆದ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಈತ ಕರ್ನಾಟಕ ರಾಜ್ಯ ತಂಡದ ನಾಯಕನಾಗಿ ಆಯ್ಕೆಯಾದದ್ದು ಈತನ ಸಾಧನೆಗೆ ಮತ್ತಷ್ಟು ಮೆರಗು ನೀಡಿತು.

**ಏನಿದು ಆಟ್ಯಾಪಾಟ್ಯಾ?** ಆಟ್ಯಾ-ಪಾಟ್ಯಾ ಇದೊಂದು ಅಪ್ಪಟ ಗ್ರಾಮೀಣ ಕ್ರೀಡೆ. ಈ ಆಟಕ್ಕೆ ರಾಷ್ಟ್ರೀಯ ಮಟ್ಟದ ಮನ್ನಣೆ ಇದೆ. ರಾಷ್ಟ್ರೀಯ ಚ್ಯಾಂಪಿಯನ್‌ಶಿಪ್ ತಪ್ಪದೇ ಪ್ರತಿವರ್ಷ ನಡೆಯುತ್ತದೆ. ಆದರೆ ಈ ಕ್ರೀಡೆಗೆ ಇನ್ನೂ ಸೂಕ್ತವಾದ ಪ್ರಚಾರ ಸಿಕ್ಕಿಲ್ಲ. ಮಹಾಭಾರತದ ಚಕ್ರವ್ಯೂಹ ಘಟನೆಯಲ್ಲಿ ಅಭಿಮನ್ಯು ಒಂದೊಂದೆ ಕೋಟೆಯನ್ನು ಭೇದಿಸುತ್ತ ಹೋಗುವ ಸಂಗತಿ. ಈ ಆಟಕ್ಕೆ ಪೂರಕವಾಗಿರುವುದು ದಾಖಲೆಗಳಿಂದ ವ್ಯಕ್ತವಾಗುತ್ತದೆ. 1886ರಷ್ಟು ಹಿಂದೆಯೇ ಇದನ್ನು ಒಂದು ಕ್ರೀಡೆಯನ್ನಾಗಿ ನಿಯಮಗಳನ್ನು ರಚಿಸಿ ರೂಪಿಸಿದವರು, ಪುಣೆಯ ಆರ್ಯ ಕ್ರೀಡೋದ್ಧಾರಕ ಮಂಡಳಿಯವರು ಇಂದು ಭಾರತದಲ್ಲಿ ಈ ಕ್ರೀಡೆಯನ್ನು ಹೆಚ್ಚು ಆಡುವವರು ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಮಣಿಪುರ, ಒರಿಸ್ಸಾ ಜನರು.

ಇಂತಹ ಒಂದು ಅಪರೂಪದ ಕ್ರೀಡೆಯಲ್ಲಿ ಆಸಕ್ತಿ ತೋರಿ ತರಬೇತಿ ಪಡೆದು ರಾಷ್ಟ್ರಮಟ್ಟದ ಆಟಗಾರನಾಗಿ ರೂಪಗೊಂಡ ಭಟ್ಕಳದ ಬೆಳಕೆಯ ಗ್ರಾಮೀಣ ಪ್ರತಿಭೆ ಮತ್ತಷ್ಟು ಬೆಳಗಬೇಕಾದರೆ - ಬೆಳೆಯಬೇಕಾದರೆ ಪ್ರೋತ್ಸಾಹದ ಅಗತ್ಯವಿದೆ. ಸಂಘ-ಸಂಸ್ಥೆಗಳು, ದಾನಿಗಳು, ಮುಂದೆ ಬಂದು ಭಟ್ಕಳದ ಈ ಹೆಮ್ಮೆಯ ಕ್ರೀಡಾ ಪಟುವನ್ನು ಬೆಳೆಸುವಲ್ಲಿ ಸಹಾಯಹಸ್ತ ಚಾಚಬೇಕಿದೆ, ಗುರುತಿಸಿ ಗೌರವಿಸಬೇಕಿದೆ. ●

## ರಾಜ್ಯ ಯುವಜನ ಮೇಳದಲ್ಲಿ ಪ್ರಶಸ್ತಿ ತಂದ ಉತ್ತರ ಕನ್ನಡ

**ತು**ಮಕೂರ ಜಿಲ್ಲೆಯ ಶಿರಾ ತಾಲೂಕಿನಲ್ಲಿ ಜನವರಿ 4 ರಿಂದ 6ರ ವರೆಗೆ 2003-04ನೇ ಸಾಲಿನ ರಾಜ್ಯಮಟ್ಟದ ಯುವಜನ ಮೇಳ ಜರುಗಿತು. ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಬೆಳಗಾವಿ ವಿಭಾಗದಿಂದ ರಾಜ್ಯಮಟ್ಟಕ್ಕೆ ಪ್ರತಿನಿಧಿಸಿದ ಉತ್ತರ ಕನ್ನಡ ಜಿಲ್ಲೆ ಯುವಕ/ಯುವತಿಯರು ಬಹುಮಾನಗಳ ಗೆಲ್ಲುವುದರ ಮೂಲಕ ಜಿಲ್ಲೆಗೆ ಹೆಮ್ಮೆ ತಂದಿದ್ದಾರೆ. ಮುಂಡಗೋಡ ಸವಿತಾ ಯುವತಿ ಮಂಡಳದ ಅಮಿತಾ ಮಾತಬೆಟ್ಟಕರ ರಂಗಗೀತೆಯಲ್ಲಿ ಪ್ರಥಮ ಹಾಗೂ ಜಾನಪದ ನೃತ್ಯದಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಸಿದ್ದಾಪುರ ಬಾಳೇಸರದ ಸ್ತ್ರೀ ಶಕ್ತಿ ಯುವತಿ ಮಂಡಳ ಶೋಭಾನೆಯಲ್ಲಿ ಪ್ರಥಮ ಹಾಗೂ ಸಿದ್ದಾಪುರದ ಕಿಬ್ಬಳಿಯ ಜ್ಯೋತಿ ಯುವತಿ ಮಂಡಳ ಕೋಲಾಟದಲ್ಲಿ ದ್ವಿತೀಯ ಮತ್ತು ಯಲ್ಲಾಪುರದ ಕಳಚೆಯ ಕಮಲಾ ನೆಹರು ಯುವತಿ ಮಂಡಳದ ವಿಶಾಲಾಕ್ಷಿ ಭಟ್ ಭಾವಗೀತೆಯಲ್ಲಿ ತೃತೀಯ ಬಹುಮಾನ ತಂದಿದ್ದಾರೆ. ಇನ್ನೂ ಯುವಕ ವಿಭಾಗದಲ್ಲಿ ಕುಮಟಾ ಕತಗಾಲದ ಬಂಡಿವಾಡ ರೈತ ಯುವಕ ಸಂಘ ಯಕ್ಷಗಾನದಲ್ಲಿ ಪ್ರಥಮ ಹಾಗೂ ಶಿರ್ಸಿ ಉಪಳೆಕೊಪ್ಪದ ಸತ್ಯಸಾಯಿ ಯುವಕ ಸಂಘ ಡೊಳ್ಳು ಕುಣಿತದಲ್ಲಿ ದ್ವಿತೀಯ ಹಾಗೂ ಮುಂಡಗೋಡದ ಚೌಡಳ್ಳಿಯ ಮೈಲಾರೇಶ್ವರ ಯುವಕ ಮಂಡಳದ ನಾಗರಾಜ ಕಾಳೆ, ಏಕಪಾತ್ರಾಭಿನಯದಲ್ಲಿ ಪ್ರಥಮ ಬಹುಮಾನ ಪಡೆದು ಜಿಲ್ಲೆಗೂ ಬೆಳಗಾವಿ ವಿಭಾಗಕ್ಕೂ ಕೀರ್ತಿ ತಂದಿದ್ದಾರೆ. ಇವರನ್ನು ಜಿಲ್ಲಾ ಯುವ ಒಕ್ಕೂಟದ ಪರವಾಗಿ ಅಧ್ಯಕ್ಷ ಸುನೀಲ ಹೆಗಡೆ ಹಾಗೂ ಕಾರ್ಯದರ್ಶಿ ಜಯಪ್ರಕಾಶ ನಾಯ್ಕ ಅಭಿನಂದಿಸಿದ್ದಾರೆ. ಯುವಬಿಂಬದ ಅಭಿನಂದನೆಗಳು ●



ಅಂತ. ಜಿಲ್ಲಾ ಪತ್ರಿಕೆಯಲ್ಲಿ ವರದಿಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಎಂದು ಪಾಂಡುರಂಗ ಹೆಗಡೆಯವರು ಅವರಿಗೆ ನನ್ನನ್ನು ಪರಿಚಯಿಸಿದರು. ಅವರು ತಡ ಮಾಡಲಿಲ್ಲ. ನಿಧಾನವಾಗಿ ನನ್ನ ಹೆಗಲ ಮೇಲೆ ಕೈಹಾಕಿ ನಡೆಯುತ್ತ, ಅರೇ! ಸಹೋದರ, ನೀನು ವಿಘ್ನ ವಿನಾಶಕ ಕಣೋ, ನೀನಿರುವುದರಿಂದ ಈ ಪಾದಯಾತ್ರೆಯಲ್ಲಿ ಯಾವ ವಿಘ್ನವೂ ಬರದು. ಯಾವ ಭಯವೂ ಇರದು. ನಾವು ಯಾವುದೇ ಕಾರ್ಯ ಮಾಡುವಾಗಲೂ ಮೊದಲು ಗಣೇಶನ ಪೂಜೆ ಮಾಡುತ್ತೇವೆ. ಈಗ ನಮ್ಮೊಂದಿಗೆ ಗಣೇಶ ಇದ್ದಾನೆ ಅಂದರೆ ಕೇಳಬೇಕೇ? ಎಂದಾಗ ನನ್ನೊಳಗೆ ಮಿಂಚಿನ ಸಂಚಾರ. ಸ್ವರ್ಗಕ್ಕೆ ಮೂರೇ ಗೇಣು! ಮಾತೇ ಹೊರಡದೆ ಮೂಕವಿಸ್ಮಿತನಾಗಿದ್ದೆ.

ಅವರು ಎಲ್ಲರೊಂದಿಗೂ ಮಾತನಾಡುತ್ತ ಸಾಗಿದರು. ಎಲ್ಲರಲ್ಲೂ ತಾವೇ ಹೆಸರು ಕೇಳಿ ಪರಿಚಯ ತಿಳಿದುಕೊಂಡರು. ತುಂಬ ಸರಳವಾಗಿ ಮಾತನಾಡಿ ಅಚ್ಚರಿ ಮೂಡಿಸಿದರು. ಅವರ ಊಟ ಕೂಡ ಅಷ್ಟೇ ಸರಳ. ಎರಡು ಚಪಾತಿ ಕುಡಿಯಲು ನೀರಿದ್ದರೆ ಊಟ ಮುಗಿಯಿತು. ರಾತ್ರಿಯಂತೂ ಒಂದು ಲೋಟ ಹಾಲೇ ಊಟ. ಆಂದೋಲನಕಾರ ಹೊಟ್ಟೆ ಬಿರಿಯುವಂತೆ ಊಟ ಮಾಡುವುದು ರೂಢಿಸಿಕೊಳ್ಳಬಾರದು ಎಂಬುದು ಬಹುಗುಣರ ವಾದ.

ಅತ್ತ ಇದೇ ಕಾಳಿ ಸಂಗಮದಲ್ಲಿ ನಾಳೆಯೋ ನಾಡಿದ್ದೋ ಬರಲಿದ್ದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ರಕ್ಷಣೆಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ನೂರಾರು ಪೋಲಿಸರನ್ನು ನಿಯೋಜಿಸುವ ತಯಾರಿಯಲ್ಲಿದ್ದ ಅಧಿಕಾರಿಗಳು ಬಹುಗುಣರ ರಕ್ಷಣೆಗೆ ಒಬ್ಬ ಪೋಲಿಸ ಪೇದೆಯನ್ನು ನೇಮಿಸಿದ್ದರು! ಆದರೆ ಈ ಅಜಾತ ಶತ್ರು, ಹಸಿರು ಸಂತನಿಗೆ ಅದರ ಅವಶ್ಯಕತೆಯೇ ಇರಲಿಲ್ಲ!!

(ಇನ್ನೂ ಇದೆ)



# ದೆವ್ವದ ಬೆಟ್ಟದಲ್ಲೊಂದು ಜಲಪಾತ

**ವಿಸ್ಮಯ ಬಿಂಬ**

ಸಂಗ್ರಹ : ಕಾನಸೂರುರಾಜು

ಪೂರ್ವ ವೆನಿಜುವಲದ ಗ್ರ್ಯಾನ್‌ಸಬಾನಾ ಪ್ರದೇಶದ ದಟ್ಟಾರಣ್ಯಗಳ ಮೇಲೆ ಹಲವಾರು ಪ್ರಸ್ಥಭೂಮಿಗಳಿವೆ. ಅವುಗಳ ಅಂಚುಗಳು ಚಿತ್ರವಿಚಿತ್ರವಾಗಿ ಕೊರೆದು ಹೋಗಿವೆ. ಅದರಲ್ಲಿ ಒಂದು ಆಯನ್ ಟೆಪು ಅಥವಾ ದೆವ್ವದ ಬೆಟ್ಟ. ಇಂತಹ ಪ್ರಸ್ಥಭೂಮಿಯಿಂದ ಧುಮುಕುತ್ತದೆ. ನಯನ ಮನೋಹರ ದೃಶ್ಯಾವನ್ನೊಳಗೊಂಡ ಜಲಪಾತ - ಅದೇ ಏಂಜಲ್ ಜಲಪಾತ.

ಚೂರೂನ್ ನದಿಯ ಕಡಿದಾದ ಕೋಡುಗಲ್ಲಿನ ಕೆಳಗಡೆ 197 ರಿಂದ 295 ಅಡಿ ಅಗಲಕ್ಕೆ ಏಂಜಲ್ ಜಲಪಾತ ಧುಮುಕುತ್ತದೆ. ಮೊದಲನೆಯ ನೇರಪಾತ 2646 ಅಡಿಗಳದ್ದಾಗಿದ್ದು ಉಳಿದ ಭಾಗ 564 ಅಡಿಗಳ ಕೆಳಕ್ಕೆ ಬೀಳುತ್ತದೆ. ಜಲಪಾತದ ಒಟ್ಟು ಎತ್ತರ 3210 ಅಡಿಗಳು. ಅಂದರೆ ನಮ್ಮ ಜೋಗ ಜಲಪಾತದ ನಾಲ್ಕು ಪಟ್ಟು ದೊಡ್ಡದ್ದು. ಬುಡಮಟ್ಟದಲ್ಲಿ 500 ಅಡಿಗಳಷ್ಟು ಅಗಲವಾಗಿದ್ದು ಅದು ದೊಡ್ಡ ಕೊಳವಾಗುತ್ತದೆ. ಆ ನೀರು ಕರೋನಿ ನದಿಯ ಉಪನದಿಯಾದ ಚೂರೂನೆ ನದಿಗೆ ಸೇರುತ್ತದೆ. ಈ ಜಲಪಾತದ ಮತ್ತೊಂದು ವಿಶೇಷವೆಂದರೆ ಬೆಟ್ಟದ ಅರ್ಧಚಂದ್ರಾಕೃತಿಯ ಪ್ರಾಕೃತಿಕ ಸೌಂದರ್ಯದ ಅದ್ಭುತ ದೃಶ್ಯ ಸವಿಯುವುದು.

ಇದು ಎತ್ತರದ ಜಲಪಾತವೆಂಬುದಲ್ಲದೇ ತೀರ ಈಚೆಗೆ ಪತ್ತೆ ಮಾಡಿದಂತೆ ಜಗತ್ತಿನ ಅದ್ಭುತಗಳಲ್ಲೊಂದು ಎಂಬುದು ಏಂಜಲ್ ಜಲಪಾತದ ವೈಶಿಷ್ಟ್ಯ. ಹಾಗೆಯೇ ಅದು ಅತ್ಯಂತ ದುರ್ಗಮವೂ ಹೌದು. ಪರಿಕ್ಷಾರ್ಥ ವೈಮಾನಿಕ ಹಾರಾಟಗಾರ ಜೇಮ್ಸ್ ಏಂಜಲ್ ಚಿನ್ನದ ಗಟ್ಟಿಗಳ ನಿಕ್ಷೇಪವನ್ನು ಹುಡುಕುತ್ತಿರುವಾಗ ಆತ ದೆವ್ವದ ಬೆಟ್ಟದ ಮೇಲೆ ಹಾರಾಡುತ್ತಿರುವಾಗ ಈ ಜಲಪಾತವನ್ನು ಕಂಡ ಆದ್ದರಿಂದ ಈ ಜಲಪಾತಕ್ಕೆ ಆತನ ಹೆಸರಿನಿಂದಲೇ ಕರೆಯಲಾಯಿತು.

ದೆವ್ವದ ಬೆಟ್ಟದಲ್ಲಿ ಕಲ್ಲುಗುಂಡುಗಳಿಂದ ಕೂಡಿದ ಚೌಗು ನೆಲದ ಮೇಲೆ ಏಂಜಲ್ಸ್ ಮತ್ತು ಆತನ ಇಬ್ಬರು ಸಂಗಾತಿಗಳು ತಮ್ಮ ವಿಮಾನವನ್ನು 1937ರಲ್ಲಿ ಅಪಾಯಕರ ರೀತಿಯಲ್ಲಿ ಇಳಿಸಿದರು. ಆದರೆ ಅವರಿಗೆ ಏಂಜಲ್ ಜಲಪಾತದ ಬಳಿಗೆ ಹೋಗಲಾಗಲಿಲ್ಲ. ಅಮೇರಿಕದ ವ್ಯಕ್ತಿಯೊಬ್ಬನ ನೇತೃತ್ವದ ಸಾಹಸಿಗಳ ತಂಡ 1949ರಲ್ಲಿ ಏಂಜಲ್ ಜಲಪಾತದ ಬುಡವನ್ನು ಸೇರಿ ಖಚಿತವಾದ ಸಮೀಕ್ಷೆ ನಡೆಸಿ ಈ ಜಲಪಾತವೇ ಜಗತ್ತಿನ ಅತೀ ಎತ್ತರದ ಜಲಪಾತ ಎನ್ನುವುದನ್ನು ನಿರ್ಣಯಿಸಿತು. ವೆನಿಜುವೆಲದ ದುರ್ಗಮ ಅರಣ್ಯದಲ್ಲಿ ಅಡಗಿರುವ ಈ ಅದ್ಭುತದ ಪೂರ್ಣ ಸ್ವರೂಪ, ಸೌಂದರ್ಯವನ್ನು ನೋಡಲು ವಿಮಾನದಲ್ಲಿ ಪ್ರಯಾಣಿಸುವವರಿಗೆ ಮಾತ್ರ ಸಾಧ್ಯ.

ಕಥೆ

# "ಪ್ರೀತಿ ಮರೆತ ಪ್ರೇಯಸಿ"

**ಶಿವಶಂಕರ ಕೋಲ್‌ಸಿರ್ಸಿ**



ನನಗವಳು ಸಿಗಬಹುದು ಎಂಬ ಕಲ್ಪನೆಯೊಂದಿಗೆ ಶಶಿ ಫೋನ್ ಮಾಡುತ್ತಾನೆ. "ಅವನದೃಷ್ಟವೋ, ಅವಳದೃಷ್ಟವೋ" ಅವಳೆ ಫೋನ್ ಎತ್ತುತ್ತಾಳೆ. ಹಲೋ ನಾನು ಶಶಿ ನೀವ್ಯಾರು? ನಾನು ಪ್ರಿಯ ಎಂದು ಹೇಳುತ್ತಾಳೆ. ನಾನೆಷ್ಟು ಅದೃಷ್ಟವಂತ ಎಂದು ಶಶಿ ಮಾತಿಗಾರಂಭಿಸುತ್ತಾನೆ. ತಾನು ಅಂದುಕೊಂಡದ್ದನ್ನು ಅವಳಲ್ಲಿ ತಿಳಿಸಲು ಸುವರ್ಣಾವಕಾಶವೆಂದು ಮನದಲ್ಲಿ ಸಂತಸಗೊಳ್ಳುತ್ತಾನೆ. ಕ್ಷೇಮ ಸಮಾಚಾರದ ನಂತರ ನೇರವಾಗಿ ಅವಳನ್ನು ಇಷ್ಟಪಟ್ಟ ವಿಚಾರ ತಿಳಿಸುತ್ತಾನೆ. ಪ್ರಿಯಾ ಇದರಿಂದ ಕಸಿವಿಸಿಗೊಳ್ಳುತ್ತಾಳೆ. ಇವನು ಈ ರೀತಿ ಹೇಳುತ್ತಾನೆಂದು ನಿರೀಕ್ಷಿಸಿರುವುದಿಲ್ಲ. ಆದರೆ ಅವನು ಅವಳನ್ನು ಇಷ್ಟ ಪಟ್ಟು ಕೇಳಿದ್ದ. ಅದಕ್ಕವಳು ಇದು ತಪ್ಪು ಎನ್ನುತ್ತಾಳೆ ಹಾಗಾದರೆ ಒಂದು ಹುಡುಗ ಒಂದು ಹುಡುಗಿ ಇಷ್ಟಪಡೋದ ತಪ್ಪಾ? ಎಂಬ ಪ್ರಶ್ನೆ ಅವನಲ್ಲಿ ಮೂಡುತ್ತದೆ.

ಅವರಿಬ್ಬರು ಮೊದಲಿಂದಲು ಪರಿಚಿತರಾಗಿದ್ದರು. ಅವಳು ಅವನಲ್ಲಿ ಪ್ರೀತಿಯ ಭಾವನೆ ಹೊಂದಿದ್ದಳೋ ಇಲ್ಲವೋ. ಆದರೆ ಅವನು ಅವಳನ್ನು ನೋಡಿದಾಗಿನಿಂದ ಅವಳಲ್ಲಿ ಪ್ರೀತಿಯ ಭಾವನೆ ಮೂಡಿಸಿಕೊಂಡಿದ್ದ. ಅವನ ಇಚ್ಛೆ ಅವಳಲ್ಲಿ ಹೇಳಲು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದ. ಇದೇ ಒಳ್ಳೆ ಅವಕಾಶವೆಂದು ತನ್ನ ಇಚ್ಛೆ ತಿಳಿಸುತ್ತಾನೆ. ಈ ಮೊದಲು ಯಾವ ಹುಡುಗಿಗೂ ಹೀಗೆ ಕೇಳಿರುವುದಿಲ್ಲ. ಅವಳು ಯಾವ ರೀತಿ ಮೋಡಿ ಮಾಡಿದಳೋ ಅವನ ತುಂಬೆಲ್ಲಾ ಅವಳೆ ತುಂಬಿ ಕೊಂಡಿದ್ದಳು. ಅವನೆಷ್ಟು ಅವಳನ್ನು ಮರೆಯಲು ಪ್ರಯತ್ನಿಸಿದರು ಮನಸ್ಸಿನಿಂದ ದೂರ ತಳ್ಳಲಾಗಲಿಲ್ಲ.

ಸೂರ್ಯ ಉದಯಿಸುವಾಗ ಕಮಲ ಬಿರಿಯುವಂತೆ ಪ್ರತಿಕ್ಷಣದಲ್ಲೂ ಅವಳ ನೆನಪು ಕಾಡುತ್ತಿತ್ತು. ಅವನ ಪ್ರತಿ ಉಸಿರು ಅವಳಾಗೆ ಆವನ ದೇಹದಲ್ಲೆಲ್ಲಾ ವ್ಯಾಪಿಸಿದ್ದಳು. ಯಾವ ಕಾರ್ಯದಲ್ಲಿ ಏಕಾಗ್ರತೆ ಸಾಧಿಸಲಾಗುತ್ತಿರಲಿಲ್ಲ. ಹೀಗಾಗಿ ಅವಳು ತನ್ನನ್ನು ಇಷ್ಟ ಪಡುತ್ತಾಳೋ? ಇಲ್ಲವೋ? ಎಂಬ ತೀರ್ಮಾನಕ್ಕೆ ಬರಲು ಅವಳಲ್ಲಿ ನೇರವಾಗಿ ತನ್ನ ಅಭಿಪ್ರಾಯ ವ್ಯಕ್ತ ಪಡಿಸುತ್ತಾನೆ. ಅದಕ್ಕವಳು ನೀನು ನನ್ನನ್ನು ಬೇಗ ಕೇಳಿದೆ. ಇನ್ನೂ ಕೆಲ ವರುಷ ಕಳೆದ ನಂತರ ಕೇಳಬಹುದಿತ್ತು ಎನ್ನುತ್ತಾಳೆ. ಪ್ರೀತಿಗೆ ಜಾತಿ, ದೇಶ, ವಯಸ್ಸಿನ ಮಿತಿ ಇಲ್ಲವೆನ್ನುತ್ತಾರೆ. ಇವಳ ಪ್ರಕಾರ ಪ್ರೀತಿಸಲು ವರುಷ ಮಿತಿ ಇದೇಯೇ? ಎಂಬ ಸಂಶಯ ಮೂಡುತ್ತದೆ. ಅವನು ಇನ್ನೂ ಸಮಯ (ವರುಷ) ಕಾಯುತ್ತಿದ್ದನೇನೋ, ಆದರೆ ಅವಳು ತನ್ನಿಂದ ದೂರವಾಗಬಹುದು ಎಂಬ ಸಂದೇಹ, ಕಾಲ ಬದಲಾವಣೆ ತರಬಹುದೆಂಬ ಆತುರದಿಂದ ಕೇಳುತ್ತಾನೆ.

ಹೀಗೆ ಸಮ್ಮಿಶ್ರ ಸರ್ಕಾರದಂತೆ ಗೊಂದಲದಲ್ಲಿ ಹಲವು ದಿನಗಳು ಉರುಳಿದ ನಂತರ ಅವಳು ನನ್ನನೇಕೆ ಇಷ್ಟಾ ಪಟ್ಟೆ? ಎಂದು ಕೇಳುತ್ತಾಳೆ. ಸಂಶಯ ಬಂದಾಗ ವಿದ್ಯಾರ್ಥಿಗಳು ಶಿಕ್ಷಕರಲ್ಲಿ ಪ್ರಶ್ನೆ ಕೇಳುತ್ತಾರೆ. ಅದೇ ರೀತಿ ಅವನು ಅವಳಿಂದ ಇಂತಹ ಪ್ರಶ್ನೆ ನಿರೀಕ್ಷಿಸಿದ್ದ. ಅದಕ್ಕೆ ತಕ್ಕಂತೆ ಅವಳು ಸ್ಪಂದಿಸಿದ್ದಳು.

ಅವಳು ಸುಂದರಿ ಎಂಬ ಕಾರಣದಿಂದ ಅವಳನ್ನೆ ಇಷ್ಟಾಪಟ್ಟಿರಲಿಲ್ಲ. ಹಾಗಂತ ಅವಳು ಸುಂದರಿಯೇ ಅಲ್ಲಾ ಅಂತಲ್ಲ.

ಐಶ್ವರ್ಯ ರೈ ಅಲ್ಲದಿದ್ದರು, ಸೌಂದರ್ಯ ರಾಶಿಯೇ ಅವಳು. ಅವಳ ಸೌಂದರ್ಯಕ್ಕಿಂತ ಅವಳ ಗುಣಗಳು ಆಯಸ್ಕಾಂತ ಕಬ್ಬಿಣ ಆಕರ್ಷಿಸುವಂತೆ. ಅವನನ್ನು ಅವಳ ಹತ್ತಿರ ತಂದಿತ್ತು. ನನ್ನನ್ನು ಯಾಕೆ ಇಷ್ಟಪಟ್ಟ ಎಂಬ ಕಾರಣ ತಿಳಿದು ತನಗರಿವಿಲ್ಲದಂತೆ ಮನಸ್ಸು ನೀಡುತ್ತಾಳೆ. ಮನೆಯ ಪರಿಸ್ಥಿತಿಯ ಒತ್ತಡಗಳಿಗೊಳಗಾಗಿ ತನ್ನ ಪ್ರೀತಿ ಹೊರಗಿಡಲು ಹಿಂಜರಿಯುತ್ತಾಳೆ. ನಂಬಿಕೆ ವಿಶ್ವಾಸದ ಕೊರತೆಗಳು ಇದಕ್ಕೆ ಕಾರಣವಿರುತ್ತವೆ. ಅವಳ ಹಿಂಜರಿಕೆಗೆ ಪ್ರಮುಖ ಕಾರಣವೆಂದರೆ ತಮ್ಮ ಪ್ರೀತಿ ಎಲ್ಲಿ ಪಬ್ಲಿಕ್ ಆಗುತ್ತದೋ ಎಂಬ ಭಯ. "ಪ್ರೀತಿ ಮಾಡಬಾರದು ಮಾಡಿದರೆ ಜಗಕೆ ಹೆದರಬಾರದು" ಎಂಬ ಚಿತ್ರಗೀತೆ ಕೇಳಿದ್ದರೂ ಕಿವುಡಾಗಿದ್ದಾಳೆನೋ ಸಮಾಜದ ಹೆದರಿಕೆಯೋ...... ಪ್ರೀತಿಯಿಂದ ದೂರ ಉಳಿಯುತ್ತಾಳೆ ಎಂಬುದು ಅವನಿಗೆ ತಿಳಿಯುತ್ತಿಲ್ಲ.

ಪ್ರೀತಿಯಲ್ಲಿ ನಲಿವಿದೆ ಎಂದು ಅರಿತಿದ್ದ ಶಶಿ ಅವಳ ಪ್ರೀತಿಗಾಗಿ ಹಲವಾರು ರೀತಿಯ ನೋವುಣ್ಣುತ್ತಾನೆ. ನಿದ್ರೆ, ಊಟ ಬಿಟ್ಟು ಅವಳ ಧ್ಯಾನದಲ್ಲಿಯೇ ದಿನ ದೂಡುತ್ತಾನೆ. ತನ್ನ ಪ್ರಥಮ ಪ್ರೀತಿಯ ವಸ್ತುವೇ ದೂರವಾಗುತ್ತದೇನೋ ಎಂದು ಹಪಹಪಿಸುತ್ತಾನೆ. ಪ್ರೀತಿಯ ಆರಂಭದಲ್ಲೇ ಇಷ್ಟೆಲ್ಲಾ ನೋವುಂಡ ಆರಂಭವೇ ಹೀಗಾದರೇ ಅಂತ್ಯ ಹೇಗಾಗಬಹುದೆಂದು ಸಂಕಟಗೊಂಡು ನಿದ್ರೆಯಿಂದ ಎಚ್ಚೆಳುತ್ತಾನೆ.

# ಕೋಟೆಯ 'ಕಳೆಬರ' !




ಗಣೇಶ ಪಿ. ನಾಡೋರ

ಸದಾಶಿವಗಡ ಗುಡ್ಡವನ್ನು ಹತ್ತಿಳಿದು ಸಾಗುತ್ತಿದ್ದಂತೆ ಕೋಟೆಯ ಕಳೆಬರ ಮನವನ್ನು ಕಾಡತೊಡಗಿತ್ತು. ರಕ್ಷಿಸುವವರೇ ಇಲ್ಲದ ಈ ಕಳೆಬರದ ಅಡಿಯಲ್ಲಿ ಇತಿಹಾಸದ ಗತವೈಭವವೇ ಅಡಗಿದೆ ಅನ್ನಿಸಿತು. ಕುದುರೆಗಳ ಓಟದ ಸಪ್ಪಳ, ರಾಜ ರಾಣಿಯರ ಸರಸ, ಕತ್ತಿ - ಖಡ್ಗಗಳ ಠೇಂಕಾರ, ಕಿವಿಗಡಚಿಕ್ಕುವ ಫಿರಂಗಿ ಸದ್ದು, ಯುದ್ಧದಲ್ಲಿ ಚೆಲ್ಲಿದ ರಕ್ತ, ಆಳರಸರ ಪರಾಕ್ರಮ - ಶೌರ್ಯ ಎಲ್ಲವೂ ತಲೆಯಲ್ಲಿ ರೀಲಿನಂತೆ ಸುತ್ತತೊಡಗಿದ್ದವು.

ಸದಾಶಿವಗಡ ಕೋಟೆಯನ್ನು 1715ರಲ್ಲಿ ಸೋಂದಾ ಅರಸ ರಾಜ ಬಸವಲಿಂಗ ನಿರ್ಮಿಸಿದನು. ತನ್ನ ತಂದೆ ರಾಜಾ ಸದಾಶಿವನ ನೆನಪಿಗೆ ಈ ಕೋಟೆಯನ್ನು ಕಟ್ಟಿಸಿದ್ದನು. ಇದಕ್ಕೂ ಮೊದಲಿನಿಂದಲೂ ನೂರಾರು ವರ್ಷಗಳ ಶ್ರೀಮಂತ ಇತಿಹಾಸ, ಸಂಸ್ಕೃತಿಯನ್ನು ಈ ಪ್ರದೇಶ ಹೊಂದಿದೆ. ಕ್ರಿ.ಶ. 1665 ಮತ್ತು 1673ರಲ್ಲಿ ಸದಾಶಿವಗಡ ಮತ್ತು ಕರಾವಳಿ ತೀರವನ್ನು ಛತ್ರಪತಿ ಶಿವಾಜಿ ಗೆದ್ದು, ದುರ್ಗಾದೇವಿಗೆ ಪೂಜೆ ಸಲ್ಲಿಸಿ ಮರಳಿದ್ದನ್ನು ಇತಿಹಾಸದ ಪುಟಗಳು ಸಾರುತ್ತವೆ. ಕದಂಬರು, ಬಿಜಾಪುರದ ಆದಿಲ್‌ಶಾಹಿ ಸುಲ್ತಾನರು, ವಿಜಯನಗರ ರಾಜರು, ಸೋಂದೆ ಅರಸರು, ಪೋರ್ಚುಗೀಸರು, ಹೈದರ್ ಅಲಿ, ಟಿಪ್ಪು ಸುಲ್ತಾನ ಮತ್ತು ಬ್ರಿಟಿಷರು ಈ ಪ್ರದೇಶದಲ್ಲಿ ಆಡಳಿತ ನಡೆಸಿದ್ದಾರೆ. 1799ರಿಂದ ಈಸ್ಟ್ ಇಂಡಿಯಾ ಕಂಪನಿಯ ವಶದಲ್ಲಿ ಈ ಕೋಟೆ ಇತ್ತು. 1928ರ ನಂತರ ಕಾರವಾರದ ಭಂಡಾರಿ ಸಮಾಜ ಇಲ್ಲಿನ ದುರ್ಗಾದೇವಿ ದೇವಸ್ಥಾನದ ಹೊಣೆ ಹೊತ್ತುಕೊಂಡು ಜೀರ್ಣೋದ್ಧಾರ ಕಾರ್ಯ ಮಾಡುತ್ತ ಬಂದಿದೆ. ಆದರೆ ಕೋಟೆ ಮಾತ್ರ ನಶಿಸತೊಡಗಿದೆ.


ಚಿತ್ರ : ಪಾಂಡುರಂಗ ಹರಿಕಾಂತ

ಇಲ್ಲಿ ಐತಿಹಾಸಿಕ ಕರಿಮುದ್ದೀನ್ ದರ್ಗಾ ಇದ್ದು, ಒಂದು ಗುಮ್ಮಟ, ನಾಲ್ಕು ಮೀನಾರಿನೊಂದಿಗೆ ನಮ್ಮನ್ನು ಆಕರ್ಷಿಸಿತು. 1665ರಲ್ಲಿ ಕಟ್ಟಿದ ಈ ದರ್ಗಾದಲ್ಲಿ ಬಾಗ್ದಾದ್‌ನ ಸಂತ ಕರಿಮುದ್ದೀನ್ ಗೌಸ್ ಜಿಲಾನಿ ಅವರ ಗೋರಿ ಇದೆ ಎಂದು ತಿಳಿಯಿತು.

17ನೇ ಶತಮಾನದಲ್ಲಿ ಈ ಪ್ರದೇಶ ಒಂದು ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು. ಸದಾಶಿವಗಡದ ಬಂದರಿನಿಂದ ಮಸ್ಲೀನ್ ಬಟ್ಟೆ, ಏಲಕ್ಕಿ, ಕಾಳುಮೆಣಸು ಹೊನ್ನಾವರ, ಭಟ್ಕಳ, ಗೋವಾ, ವಿದೇಶಗಳಿಗೂ ಹೋಗುತ್ತಿತ್ತು. ಈ ಕೋಟೆಯ ಕಾರಣದಿಂದ ಈ ಗ್ರಾಮ ಸದಾಶಿವಗಡ ಎಂದು ಪ್ರಸಿದ್ಧವಾಗಿದೆ. ವಿದೇಶಿ ಪ್ರವಾಸಿಗರಾದ ಇಬ್ನ ಬಟುಟಾ, ಬರ್ಬೋಸಾ, ಪ್ರೆಯರ್, ವಾಸ್ಕೋಡಿ ಗಾಮಾ, ಬುಕಾನಿನ್ ಇಲ್ಲಿನ ಇತಿಹಾಸಕ್ಕೆ ಶ್ರೀಮಂತ ಕೊಡುಗೆ ನೀಡಿದ್ದಾರೆ.

ಸಮುದ್ರ ಪಾತಳಿಯಿಂದ ಸುಮಾರು 200 ಅಡಿ ಎತ್ತರದ ಗುಡ್ಡದಲ್ಲಿ ಸುಮಾರು 13 ಎಕರೆ ಪ್ರದೇಶದಲ್ಲಿ ಈ ಕೋಟೆ ಹೆಬ್ಬಾವಿನಂತೆ ಮಲಗಿದೆ. 20 ಅಡಿ ಎತ್ತರ, 8 ಅಡಿ ಅಗಲದ ಈ ಕೋಟೆಯನ್ನು ನಮಗೆ 'ಇದು ಕೋಟೆ' ಎಂದು ಗುರುತಿಸುವುದೇ ಕಷ್ಟವಾಯಿತು. ಹೆಚ್ಚಿನ ಕಡೆ ಕೋಟೆಯ ಕಲ್ಲುಗಳು ಕುಸಿದು ಬಿದ್ದು ಹೋಗಿದ್ದವು. ಕಂಡ ಕಂಡಲ್ಲಿ ಮರ-ಗಿಡಗಳ ಬೇರುಗಳು ನುಗ್ಗಿ ಕೋಟೆಯನ್ನು ಹಾಳುಗೆಡವಿದ್ದವು. ಕೋಟೆಯ ನೈಜ ವಾಸ್ತುಶಿಲ್ಪವೇ ಕಳೆದುಹೋಗಿತ್ತು. ಆದರೂ ಪಶ್ಚಿಮಾಭಿಮುಖವಾಗಿ ನಿರ್ಮಿಸಿರುವ ಕಾವಲು ಬುರುಜೊಂದು ಇನ್ನೂ ಹಾಗೇ ಉಳಿದಿದ್ದು ಅಚ್ಚರಿ ಮೂಡಿಸಿತು. ಕೋಟೆಯ ತುದಿಯ ಸ್ತಂಭ ಬಿದ್ದು ಹೋಗಿತ್ತು. ಈ ಸ್ತಂಭದ ಬಳಿ ನಿಂತರೆ ಇಡೀ ಕಾರವಾರ ಪಟ್ಟಣವನ್ನು ನೋಡಬಹುದು.

ಕಾರವಾರಕ್ಕೆ ಆಗಮಿಸುವ ಪ್ರವಾಸಿಗರಿಗೆ ಕಾಣಸಿಗುವ ಅಪರೂಪದ ಐತಿಹಾಸಿಕ ಸ್ಮಾರಕ ಈ ಕೋಟೆ!
ಆದರದು ಮಣ್ಣುಪಾಲಾಗತೊಡಗಿತ್ತು !!

(ಇನ್ನೂ ಇದೆ)

## ಕವನ

### ಫಿಲಾಸಫಿ ಹುಡುಗಿ

ಓ ಹುಡುಗಿ! ಯಾಕೆ ಮೌನದ ಚಿಪ್ಪಿನೊಳಗೆ
ಅರ್ಥಕ್ಕರ್ಥ ಮುಚ್ಚಿ ಹೋಗಿ ಅರಳು ಕಂಗಳೊಳಗೆ
ನೋವಿನ ಛಾಯೆಯ ಬಿಂಬದ ಪ್ರತಿರೂಪ ಮೆತ್ತಿಕೊಂಡಿರುವೆ ?
ಈಚೆ ಬಾ !
ಹೊರಗಿಣುಕಿ ನೋಡು !
ವಿಶಾಲ ಪ್ರಪಂಚದ, ಕ್ಷಣ-ಕ್ಷಣವ,
ಹಕ್ಕಿ-ಹಕ್ಕಿ ಆಯ್ದುಕೊಳ್ಳುವ ಪರಿಯಂತೆ
ಕತ್ತಲ ನಂತರದ ಎಳೆಸೂರ್ಯನ ಬಿಂಬ ಹುಡುಕು!
ಕಳೆದುಹೋದ ಆ ಕೆಟ್ಟ ದಿನ.
ಸಂಬಂಧಗಳೇ ಹುಳುಕು ಎನಿಸಿದ
ಆ ಕೆಟ್ಟ ಘಳಿಗೆ !
ಮತ್ತೆ ಮರುಕಳಿಸದಿರಲಿ !
ಕೈಹಿಡಿದವ, ನಲಿವ ತುಂಬುವವ
ನೂರು ಕನಸಿಗೆ ಬಣ್ಣ ತುಂಬಿ,
ಭಾವನೆಗಳ ಮಿಟುವವ,....
ಅಪಶೃತಿಯಂತೆ, ನಡತೆಗೆಟ್ಟು ಹೋದ
ಸಂಬಂಧಕ್ಕೆ,ಮೌಲ್ಯಕೊಡದೆ,ತ್ತೆತ್ತಲೋ
ಕರಗಿಹೋದ.ಅವನನ್ನ ಮರೆತು ಬಿಡು
ಎನ್ನು ನಿಲ್ಲು, ಈ ಪ್ರಪಂಚದಲ್ಲಿ ಒಂದಾಗಿ
ಬೆರೆತು, ನೂರು ನೋವಿರುವವರಿಗೆ, ತುಸು
ಚೈತನ್ಯ ನೀಡಲು ಮುಂದಾಗು,
ಭಾವನೆಗಳ ಸೋಲು, ಜೀವನದ ಗೆಲುವಾಗಲಿ.
- ಇದು ನಿನಗಾಗಿ!!

- ಪ್ರತಿಭಾ ಸುರೇಶ



### ಸಿಂಹಾಲೋಕನ

ಭೂತದ ರಸನಿಮಿಷ
ಹುಸಿಗನಸು ವರ್ತಮಾನವಿ.
ಹೌದು
ಬಯಕೆಯು ಸಹಜ
ಉಪ್ಪುತಿಂದ ದೇಹಕೆ
ತಪ್ಪಿಲ್ಲ ಪೂರ್ವಜರದು
ಬಿಸಿರಕ್ತ ಹರಿವ ಆ
ಸುಸಮಯದಿ
ಆಕಾಂಕ್ಷೆಯ ಬದುಕು
ಮೂಡಿತ್ತು ಮನದಲ್ಲಿ
ಅವರೀಗ ?
ಬಾಗಿದ ದೇಹ
ನೆರಿಗೆಯ ಚರ್ಮ
ಬದುಕನ್ನ ತೊರೆವ ಗುಳಿಬಿದ್ದ ಕಣ್ಣು.
ಕಳೆದುಹೋದ ಸುಸಮಯ
ಮರುಕಳಿಸಿದ ಚಿಂತೆಯಲಿ
ಬೇಯುತ್ತಿದೆ ಜೀವ ಮುದಿತನದಿ
ಚಿಂತೆಯ ಚಿತೆಯಲ್ಲೂ
ಸಾವಂಚಿನ ಜೀವನ
ಬಯಸಲ್ಪಟ್ಟಿದೆ ಸಿಂಹಾಲೋಕನ.

- ಶ್ರೀಧರ ಶೆಟ್ಟಿ ಸಂಪಳ್ಳಿ


ವಾಹನ ಮಾಲೀಕರ ಸೇವೆಗೆ ಸದಾ ಕಂಕಣಬದ್ಧ

**ನಿಸರ್ಗ ಸರ್ವೀಸ್ ಸ್ಟೇಶನ್**

ಅತ್ಯುತ್ಕೃಷ್ಟ ದರ್ಜೆಯ ಪೆಟ್ರೋಲ್ ಹಾಗೂ ಡೀಸೈಲ್ ಮಾರಾಟಗಾರರು

ನಿರಂತರ 24 ಗಂಟೆಗಳ ಸೇವೆ

ಜೋಗ ರಸ್ತೆ, ಹೊಸೂರು, ಸಿದ್ದಾಪುರ ( ಉ.ಕ.)

ಮಾಲಿಕರು : ಶ್ರೀ ಆನಂದ ಈರಾ ನಾಯ್ಕ

ಮೊಬೈಲ್ : 9448679220